# ಗುಲಬರ್ಗಾ ವಿಶ್ವವಿದ್ಯಾಲಯ

ಜ್ಞಾನ ಗಂಗಾ, ಕಲಬುರಗಿ-585 106, ಕರ್ನಾಟಕ

ದೂರವಾಣಿ ಸಂ. 08472-263202 ಫ್ಯಾಕ್ಸ್: 08472-263206, ಇ-ಮೇಲ್: registrargug@rediffmail.com


ಕ್ರ.ಸಂ.ಗುವಿಕ/ವಿಮವಿ/ಅರ್ಹತಾ ಪತ್ರ1/2020-21/319 ದಿನಾಂಕ 18/08/2020

## ಸುತ್ತೋಲೆ

ವಿಷಯ : 2020-21 ನೇ ಶೈಕ್ಷಣಿಕ ಸಾಲಿನಲ್ಲಿ ಜರುಗಲಿರುವ ವಿವಿಧ ಪದವಿ ಕೋರ್ಸುಗಳಿಗೆ ವಿದ್ಯಾರ್ಥಿಗಳ ಪ್ರವೇಶಾತಿಗಳಲ್ಲಿ ಪಾಲಿಸಬೇಕಾದ ನಿಯಮಗಳ ಕುರಿತು.

ಉಲ್ಲೇಖ: 1. Calender of Events No GUK/ACA/Cale-UG/2020-21/315 Dated: 28.0.2020.

2. ಕುಲಪತಿಗಳ ಒಪ್ಪಿಗೆ ದಿನಾಂಕ:18.08.2020.

ಎಲ್ಲಾ ಪದವಿ ಮಹಾವಿದ್ಯಾಲಯಗಳ ಪ್ರಾಂಶುಪಾಲರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಉಲ್ಲೇಖ (1) ರಲ್ಲಿ ನಮೂದಿಸಿದ ಪ್ರವೇಶಾತಿ ವೇಳಾಪಟ್ಟಿಯನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ನಿರ್ದೇಶಿಸುತ್ತಾ, ದಿನಾಂಕ: 01.08.2020 ರಿಂದ ಪ್ರಾರಂಭವಾಗುವ ವಿದ್ಯಾರ್ಥಿಗಳ ಪ್ರವೇಶಾತಿಯು ದಂಡಶುಲ್ಕವಿಲ್ಲದೆ ದಿನಾಂಕ: 31.08.2020 ರಂದು ಕೊನೆಗೊಳ್ಳಲಿರುವುದರಿಂದ ಸಂಬಂಧಿಸಿದ ಪ್ರಾಂಶುಪಾಲರು ಅಂತಿಮ ದಿನಾಂಕಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಆನ್‌ಲೈನ್ ಫೀಡಿಂಗ್ ಅಂದೆ ಮಾಡುವುದು ಅಲ್ಲದೇ ಕೊನೆಯ ದಿನಾಂಕದಂದು ಪ್ರವೇಶ ಪಡೆದ ವಿದ್ಯಾರ್ಥಿಗಳ ಆನ್‌ಲೈನ್ ಪೀಡಿಂಗ್ ದಿನಾಂಕ: 31.08.2020. ವರೆಗೂ ಕಡ್ಡಾಯವಾಗಿ ಪೂರ್ಣಗೊಳಿಸತಕ್ಕದ್ದು.

ನಂತರ ದಂಡ ಶುಲ್ಕ ರೂ.500/- ದೊಂದಿಗೆ 15.09.2020 ರಂದು ಇರುವುದರಿಂದ ಅಂದೆ ವಿದ್ಯಾರ್ಥಿಗಳ ಮಾಹಿತಿ ದಂಡ ಶುಲ್ಕದೊಂದಿಗೆ ಆನ್‌ಲೈನ್ ಫೀಡಿಂಗ್ ಪೂರ್ಣಗೊಳಿಸುವುದು ಅದೇ ರೀತಿ ರೂ. 2,000/- ದೊಂದಿಗೆ ದಿನಾಂಕ: 22.09.2020 ರಂದೆ ಕಡ್ಡಾಯವಾಗಿ ಆನ್‌ಲೈನ್ ಫೀಡಿಂಗ್ ಮಾಡತಕ್ಕದ್ದು ಹಾಗೂ ಸಂಬಂಧಿಸಿದ ವಿದ್ಯಾರ್ಥಿಗಳು ಪ್ರವೇಶ ಪಡೆದ ವಿದ್ಯಾರ್ಥಿಗಳ ಪಟ್ಟಿ ಕೋರ್ಸುವಾರು, ಪ್ರವರ್ಗವಾರು, ಸಂದಾಯ ಮಾಡಿದ ಶುಲ್ಕ ವಿವರ, ದಂಡಶುಲ್ಕದ ವಿವರಗಳೊಂದಿಗೆ (ಪ್ರತ್ಯೇಕವಾಗಿ ದಂಡರಹಿತ ಮತ್ತು ದಂಡಸಹಿತ ಪಟ್ಟಿ) ಮತ್ತು ವಿದ್ಯಾರ್ಥಿಗಳ ಮೂಲ ಅಂಕಪಟ್ಟಿ, ಜಾತಿ ಪ್ರಮಾಣ ಪತ್ರ ಇತರೆ ಸಂಬಂಧಿಸಿದ ದಾಖಲೆಗಳೊಂದಿಗೆ ದಿನಾಂಕ: 20.10.2020 ರ ಬದಲಾಗಿ ದಂಡ ಸಹಿತ ಪ್ರವೇಶ ಪಡೆದ ವಿದ್ಯಾರ್ಥಿಗಳ ಪಟ್ಟಿ ಮತ್ತು ಶುಲ್ಕದ ರಸೀದಿಯ ದಾಖಲೆಗಳನ್ನು 01.09.2020. ರೊಳಗೆ ಅಥವಾ ಅದಕ್ಕೂ ಮುಂಚಿತವಾಗಿ ತಪ್ಪದೇ ಸಲ್ಲಿಸತಕ್ಕದ್ದು. ಮುಂದುವರೆದು. ಪ್ರಸ್ತುತ ಮೇಲೆ ಉಲ್ಲೇಖಿತ ಪ್ರವೇಶಾತಿ ವೇಳಾಪಟ್ಟಿಯಲ್ಲಿ ನಮೂದಿಸಿದ Online feeding and forwarding list of admitted students to University Dated 22.09.2020 to 15.10.2020. ಇದನ್ನು ರದ್ದುಪಡಿಸಲಾಗಿದೆ.

ಆದ್ದರಿಂದ ಮೇಲಿನ ಎಲ್ಲಾ ವಿಷಯಗಳನ್ನು ಸಂಬಂಧಿಸಿದ ಪ್ರಾಂಶುಪಾಲರು ಕಡ್ಡಾಯವಾಗಿ ಪಾಲಿಸಲು ಸೂಚಿಸಲಾಗಿದೆ. ವಿದ್ಯಾರ್ಥಿಗಳ ಪ್ರವೇಶಾತಿ ಆನ್‌ಲೈನ್ ಪೀಡಿಂಗ್ ದಿನಾಂಕ: 17.08.2020 ರಿಂದಲೇ ಪ್ರಾರಂಭ ಮಾಡಲು ಪ್ರಾಂಶುಪಾಲರಿಗೆ ಅನುವು ಮಾಡಿಕೊಡಲಾಗುವುದು ಅದರಂತೆ ಪ್ರತಿದಿನ ಪ್ರವೇಶ ಪಡೆದ ವಿದ್ಯಾರ್ಥಿಗಳ ವಿವರ ಆನ್‌ಲೈನ್‌ದಲ್ಲಿ ಅಂದೆ ಫೀಡಿಂಗ್ ಮಾಡುವುದು. ಮತ್ತು ಹಂತ ಹಂತವಾಗಿ ದಂಡ ರಹಿತ ರೂ. 500/- ಹಾಗೂ ರೂ.2000/- ದಂಡದಂತೆ ಪ್ರತ್ಯೇಕವಾಗಿ ಪ್ರವೇಶಾತಿ ಕೊನೆಯ ದಿನಾಂಕದ ನಂತರ ದಾಖಲಾತಿಗಳನ್ನು ಸಲ್ಲಿಸುವುದು.

| | | |
|---|---|---|
| ದಂಡ ರಹಿತ ದಾಖಲೆಗಳು ಸಲ್ಲಿಸಲು ಕೊನೆಯ **ದಿನಾಂಕ: 01.09.2020** | ರೂ. 500/ ದಂಡದ ವಿದ್ಯಾರ್ಥಿಗಳ ದಾಖಲಾತಿ ಸಲ್ಲಿಸಲು ಕೊನೆಯ **ದಿನಾಂಕ: 16.09.2020** | ರೂ. 2000/- ದಂಡದ ವಿದ್ಯಾರ್ಥಿಗಳ ದಾಖಲಾತಿ ಸಲ್ಲಿಸಲು ಕೊನೆಯ **ದಿನಾಂಕ: 23.09.2020** |

ಅಲ್ಲದೆ ಆನ್‌ಲೈನ್ ಫೀಡಿಂಗ್ ಆದ ನಂತರ ದಿನಾಂಕ: 23.09.2020 ರಂದು ದಂಡ ಶುಲ್ಕ ರಹಿತ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಪಟ್ಟಿಯನ್ನು ಹಾಗೂ ದಂಡ ಶುಲ್ಕ ರೂ.500 ಮತ್ತು ರೂ.2000 ರೊಂದಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಪಟ್ಟಿಯನ್ನು ವಿಶ್ವವಿದ್ಯಾಲಯಕ್ಕೆ (Forwardal of Online feeding list of admitted students (without and with fine fee) to the University) ಸಲ್ಲಿಸಲು ತಿಳಿಸಲಾಗಿದೆ.

ಮುಂದುವರೆದು 2020-21ನೇ ಸಾಲಿಗೆ ಮುಂದುವರಿಕೆ ಸಂಲಗ್ನತೆ ನೀಡುವ ಪ್ರಕ್ರಿಯೆಯು Online affiliation ಮುಖಾಂತರ ಜಾರಿಯಲ್ಲಿದ್ದು. ಒಂದು ವೇಳೆ ವಿಶ್ವವಿದ್ಯಾಲಯವು ಯಾವುದೇ ಕಾರಣದಿಂದಾಗಿ ಕಾಲೇಜಿನ ಮುಂದುವರಿಕೆ ಸಂಲಗ್ನತೆಯನ್ನು ಮಂಜೂರಿಸದಿದ್ದಲ್ಲಿ ಸದರಿ ಕಾಲೇಜಿನಲ್ಲಿ ಪ್ರವೇಶ ಪಡೆದ ಪ್ರಥಮ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಸಮೀಪದ ಬೇರೊಂದು ಕಾಲೇಜಿಗೆ ವರ್ಗಾಹಿಸುವ ಜವಾಬ್ದಾರಿಯು ಆಯಾ ಕಾಲೇಜಿನ ಪ್ರಾಂಶುಪಾಲರದಾಗಿರುತ್ತದೆ.

18/8

ಕುಲಸಚಿವರು.

ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

ಗೆ,

ಎಲ್ಲಾ ಪದವಿ ಮಹಾವಿದ್ಯಾಲಯದ ಪ್ರಾಂಶುಪಾಲರಿಗೆ.

174

C-2 Janaral